**ದಿನಾಂಕ:22-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಎಸ್.ವಿ.ಕೆ. ರವರಿಂದಃ-**

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು . ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

ಕೇಕರೆ ರವರಿಗೆ power of attorney ನ್ನು ಸರ್ವೆ ನಂ.160/2 ಕ್ಷೇತ್ರ 39 ಗುಂಟೆಗೆ ಕೊಡಲಾಗಿತ್ತು. ಜ್ಯೋತಿಬಾ ಅಥವಾ ಕೇಕರೆ ರವರಿಗೆ ಸರ್ವೆ ನಂ.160/2 ರಲ್ಲಿನ 39 ಗುಂಟೆಗೆ ಖರೀದಿ ಪತ್ರ ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಎಂದರೆ ಸರಿಯಲ್ಲ. ಯಲ್ಲೂಬಾಯಿ ರವರ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನಾನು ಜ್ಯೋತಿಬಾ ಮತ್ತು ಕೇಕರೆ ರವರು ಸುಳ್ಳು ಖರೀದಿ ಪತ್ರವನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಯಲ್ಲೂ ಬಾಯಿ ರವರಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇದ್ದರೂ ಸಹ ಖರೀದಿ ಪತ್ರಕ್ಕೆ ಅವರ ಸಹಿಯನ್ನು ಪಡೆದಿಲ್ಲ ಎಂದರೆ ಸಾಕ್ಷಿ ಜ್ಯೋತಿಬಾ ಮಾತ್ರ ದಾವಾ ಸ್ವತ್ತಿನ ಮಾಲೀಕರು ಎನ್ನುತ್ತಾರೆ. ದಾವಾ ಸ್ವತ್ತನ್ನು ಮಾರಾಟ ಮಾಡಲು ಜ್ಯೋತಿಬಾ ರವರಿಗೆ ಏನು ಅಡಚಣೆ ಇತ್ತು ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಅವರ ಕುಟುಂಬದ ಹಣದ ಅಡಚಣೆ ಸಲುವಾಗಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಏನೇನು ಅಡಚಣೆ ಇತ್ತು ಎಂದು ಜ್ಯೋತಿಬಾ ರವರು ನಿಮಗೆ ಹೇಳಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಖರೀದಿ ಪತ್ರದಲ್ಲಿ ಹಣದ ಅಡಚಣೆ ಇತ್ತು ಎಂದು ಕೇಕರೆ ರವರು

ಬರೆದಿರುತ್ತಾರೆ, ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಖರೀದಿ ಪತ್ರ ಬರೆಸಿಕೊಳ್ಳುವ ದಿನದಂದು 45,000/- ರೂಗಳು ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಆ ದಿನ ನನ್ನ ಬಳಿ 45,000/- ರೂಗಳು ಇತ್ತು ಮತ್ತು ನಾನು ಕೇಕರೆ ರವರಿಗೆ ಕೊಟ್ಟು ಖರೀದಿ ಪತ್ರ ಬರೆಸಿಕೊಂಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೇಕರೆ ರವರು ದಾವಾ ಸ್ವತ್ತಿಗೆ ಬಂದು ನನಗೆ ಪ್ರತ್ಯಕ್ಷ ಕಬ್ಜೆಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಜ್ಯೋತಿಬಾ ಮತ್ತು ಕೇಕರೆ ಇಬ್ಬರೂ ಬಂದು ಕಬ್ಜೆ ಕೊಟ್ಟಿದ್ದಾರೆ ಎನ್ನುತ್ತಾರೆ.

**2.** ದಾವಾ ಸ್ವತ್ತಿನ ಉತ್ತರಕ್ಕೆ ಯಾರ ಜಮೀನು ಇದೆ ಎಂದರೆ ಶಿವಾಜಿ ಮರೂಚೆ ರವರ ಜಮೀನು ಇದೆ ಎನ್ನುತ್ತಾರೆ. ಶಿವಾಜಿ ಮರೂಚೆ ರವರಿಗೆ ಎಷ್ಟು ಕ್ಷೇತ್ರದ ಜಮೀನು ಇದೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಕಾಚು ಚೂಡಪ್ಪ ಕಿತ್ತೂರ ರವರ ಜಮೀನು ಇದೆ, ಎಷ್ಟು ಎಕರೆ ಇದೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಬಾವುಕು ಜಾಧವರ್ ರವರ ಜಮೀನು ಇದೆ. ದಾವಾ ಸ್ವತ್ತಿನ ಪೂರ್ವಕ್ಕೆ ಸುರೇಶ ನಾಗೋಜಿಚೆ ರವರ ಜಮೀನು ಇದೆ, ಅದರ ಸರ್ವೆ ನಂಬರ್ ಮತ್ತು ಕ್ಷೇತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ . ಖರೀದಿ ಪತ್ರ ಬರೆಯುವ ಸಮಯದಲ್ಲಿ ನಾವು ದಾವಾ ಸ್ವತ್ತಿನ ಬೌಂಡರಿಯನ್ನು ತೋರಿಸುವ ದಾಖಲೆಗಳನ್ನು ಕೇಕರೆ ರವರಿಗೆ ಕೊಟ್ಟಿಲ್ಲ . ಕೇಕರೆ ರವರು ಬರೆದ ಖರೀದಿ ಪತ್ರದಲ್ಲಿ ತೋರಿಸಿದ ಚೆಕ್ಕುಬಂಧಿ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

**3.** ಖರೀದಿ ಪತ್ರವಾದ ನಂತರ ನಿಮ್ಮ ಹೆಸರು ನಮೂದಿಸಲು ತಲಾಟಿ ರವರಿಗೆ ವರದಿಯನ್ನು ಯಾರು ನೀಡಿದ್ದರು ಎಂದರೆ ಸಾಕ್ಷಿ ಗಿರೀಶ್ ಕೇಕರೆ ರವರು ನೀಡಿದ್ದರು ಎನ್ನುತ್ತಾರೆ. ಯಾವ ವರ್ಷ ಮತ್ತು ಯಾವ ದಿನಾಂಕದಂದು ಕೊಟ್ಟಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ, ಸಾಕ್ಷಿ ನವೆಂಬರ್ 2008 ರಂದು ಕೇಕರೆ ರವರು ವರದಿ ಕೊಟ್ಟಿದ್ದಾರೆ ಎನ್ನುತ್ತಾರೆ. ವರದಿಯೊಂದಿಗೆ ಕೇಕರೆ ರವರು ಯಾವ ಯಾವ ದಾಖಲೆಗಳನ್ನು ಕೊಟ್ಟಿದ್ದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ವರದಿ ಕೊಟ್ಟ ನಂತರ ಯಲ್ಲೂಬಾಯಿ ರವರಿಗೆ ತಲಾಟಿಯವರು ನೋಟಿಸ್ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಯಲ್ಲೂಬಾಯಿ ರವರ ಅನುಪಸ್ಥಿತಿಯಲ್ಲಿ ನಿಮ್ಮ ಹೆಸರು ದಾಖಲಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇಲೆ ನೀವು ಮತ್ತು ನಿಮ್ಮ ಸಹೋದರ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಕಬ್ಜೆಯಲ್ಲಿದ್ದೀರಿ ಎಂದು ತೋರಿಸಲು ಖರೀದಿಪತ್ರ ಮತ್ತು ಪಹಣಿ ಪತ್ರಿಕೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಈದಿನದವರೆಗೂ ದಾವಾ ಸ್ವತ್ತಿನ ಕಬ್ಜೆ ನಿಮ್ಮ ಬಳಿ ಇದೆ ಎಂದು ತೋರಿಸಲು ತೆರಿಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ತೆರಿಗೆಯನ್ನು ನಾವೇ ಕಟ್ಟುತ್ತೇವೆ, ರಶೀದಿಗಳನ್ನು ಹಾಜರುಪಡಿಸುತ್ತೇವೆ ಎನ್ನುತ್ತಾರೆ. ಯಲ್ಲೂಬಾಯಿ ರವರ ಮರಣಾನಂತರ ಅವರ ಮಕ್ಕಳಾದ ವಾದಿಯರು ವಾರಸನಾತೆಯಿಂದ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ .

ಯಲ್ಲೂಬಾಯಿ ರವರ ಮಕ್ಕಳ ಅಂದರೆ ವಾದಿಯರ ಹಕ್ಕನ್ನು ಮೊಟಕುಗೊಳಿಸುವ ಸಲುವಾಗಿ ನಾನು ಖರೀದಿಸಿದ್ದೇನೆ ಮತ್ತು ಕಬ್ಜೆಯಲ್ಲಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲೂಬಾಯಿ ರವರು ನಮಗೆ ಸಂಬಂಧಿಕರು ಅಲ್ಲ ಎಂದರೆ ಸರಿ.

**4.** ಸರ್ವೆ ನಂ.160/2 ರ ಮೌಲ್ಯ ದಾವೆ ಹೂಡುವ ಸಮಯದಲ್ಲಿ ಎಷ್ಟು ಇತ್ತು ಎಂದು ಚೌಕಾಸಿ ಮಾಡಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಕೀಲರಿಗೆ ಮಾಹಿತಿ ನೀಡುವ ಸಮಯದಲ್ಲಿ ದಾವಾ ಸ್ವತ್ತಿನ ಮೌಲ್ಯ 5,00,000/- ಕ್ಕಿಂತ ಹೆಚ್ಚು ಇದೆ ಎಂದು ದಾಖಲೆಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲೆ ಕೊಟ್ಟಿಲ್ಲ , ಆದರೆ 5,00,000/- ಕ್ಕಿಂತ ಹೆಚ್ಚಿನ ಮೌಲ್ಯ ಇದೆ ಎನ್ನುತ್ತಾರೆ. ಸರ್ವೆ ನಂ.160/2 ರಲ್ಲಿ ವಾದಿಯರಿಗೆ ಸಮಾರ್ಥ ಹಕ್ಕು ಇದೆ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದ ಖರೀದಿ ಪತ್ರ ಯಲ್ಲೂಬಾಯಿ ರವರಿಗೆ ಬಂದನಕಾರಿ ಅಲ್ಲ ಎಂದರೆ ಸರಿಯಲ್ಲ . ಸರ್ವೆ ನಂ.160/2 ವಾದಿಯರ ಸಮಾಹಿಕ ಕಬ್ಜೆಯಲ್ಲಿದೆ ಎಂದರೆ ಸರಿಯಲ್ಲ. ಈ ಮೊದಲಿನ ದಾವೆಯಲ್ಲಿ ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲಗಳನ್ನೇ ಹಾಜರುಪಡಿಸಿದ್ದೆ ಎಂದರೆ ಸರಿ.

**5.** ಆ ದಾಖಲೆಗಳ ಆಧಾರದ ಮೇಲೆ ನ್ಯಾಯಾಲಯ ನೀವು ಹಾಜರುಪಡಿಸಿದ ಖರೀದಿ ಪತ್ರ ಯಲ್ಲೂಬಾಯಿ ರವರಿಗೆ ಬಂದನಕಾರಿಯಲ್ಲ ಎಂದು ಆದೇಶ ಮಾಡಿತ್ತು ಎಂದರೆ ಸರಿಯಲ್ಲ. ಆದೇಶವಾದ ನಂತರ ಯಲ್ಲೂಬಾಯಿ ರವರು ನಿಮಗೆ ಸಮ್ಮತಿ ಪತ್ರ ಅಥವಾ ಖರೀದಿ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಜ್ಯೋತಿಬಾ ರವರು ಮಾತ್ರ ಸರ್ವೆ ನಂ.160/2 ರ ಮಾಲೀಕರು ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 315 ರಲ್ಲಿನ ತೀರ್ಪಿನ

ಅಂಶಗಳನ್ನು ವಕೀಲರು ನನಗೆ ಓದಿ ಹೇಳಿದ್ದಾರೆ ಎಂದರೆ ಸರಿ. ಅದರಲ್ಲಿನ ಅಂಶಗಳನ್ನು ತಿಳಿದುಕೊಂಡ ನಂತರ ನೀವು ತೀರ್ಪನ್ನು ಒಪ್ಪಿ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

**ಪ್ರತಿವಾದಿ ನಂ.1(ಎ) ರಿಂದ (ಡಿ) ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**